ಶ್ರೀ ಜೆ ಹೆಚ್. ಪಟೇಲ್.—ನನ್ನ ರಾಜ್ಯದ ಅರಣ್ಯ ಇಲಾಖೆಯಿಂದ ನಮಗೆ ಸಿಗುತ್ತಿರುವ ಗಂಧಕ್ಕೆ ಈಗ ಟನ್ ಒಂದಕ್ಕೆ ೬೫ ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದೇವೆ. ನಾವು ಹೂಾಟ ಮಾಡುವ ಗಂಧದ ಎಣ್ಣೆಗೆ ಇದು ಸರಿಹೋಗುತ್ತಿದೆ. ನಮಗೆ ಸಾಷ್ಟು ನಮ್ಮ ಅರಣ್ಯದಲ್ಲಿಯೇ ಗಂಧದ ಮರಗಳು ದೊರಕುತ್ತಿದ್ದರೆ ತಮಿಳುನಾಡಿನ ಹರಾಜಿಗೆ ಹೋಗಬೇಕಾದ ಅವಶ್ಯಕತೆ ಇರಲಿಲ್ಲ. ಮೂರು ಸದಸ್ಯರು ಹೇಳಿದಂತೆ ಹರಾಜಿನಲ್ಲಿ ಭಾಗವಹಿಸಿ ಮೈಸೂರು ಕಾರ್ಖಾನೆಗೆ ತರುತ್ತಿರುವುದರಿಂದ ಲಾಕ್ಸನು ಜೆಚ್ಚಾಗಿ ಕಾಣುತ್ತಿದೆ. ಆದ್ದರಿಂದ ಅರಣ್ಯ ಮಂತ್ರಿಗಳನ್ನು ಮತ್ತು ಉನ್ನತ ಅಧಿಕಾರಿಗಳನ್ನು ಕರೆದು ಚರ್ಚೆಮಾಡಿ ನಮ್ಮದೇ ಆದ ಒಂದು ಬೆಲೆಯನ್ನು ನಿಗದಿಮಾಡಿ ಆ ಬೆಲೆಗೆ ಕೊಡಬೇಕೆಂದು ವಿಚಾರ ಮಾಡುತ್ತಿದ್ದೇವೆ. ಮತ್ತೆ ಅರಣ್ಯ ಇಲಾಖೆಯವರು ಅವರದೇ ಆದ ಒಂದು ವಾದವೂ ಇದೆ. ಒಂದು ಲಕ್ಷದ ಮೇಲೆ ಬೆಲೆ ಸಿಕ್ಕುವಾಗ ನಾವು ಎಷ್ಟಕ್ಕೆ ಕಡಿಮೆ ಬೆಲೆಗೆ ಕೊಡಬೇಕು ಎನ್ನುವ ಫಿನ್ಯಾಫಿಪ್ರಾಯವು ಇದೆ. ಇದನ್ನು ಬಗೆಹರಿಸಿ ನಮ್ಮ ಸ್ಯಾಂಡಲ್ ವುಡ್‌ನ್ನು ನಾವೇ ಉಪಯೋಗ ಮಾಡಿದರೆ ನಮಗೆ ಅನುಕೂಲವಾಗುತ್ತದೆ ಮತ್ತು ಕಾರ್ಖಾನೆಯನ್ನು ಜೀವಂತ ಮಾಡಲು ಸಾಧ್ಯವಾಗುತ್ತದೆಂದು ಅಭಿಪ್ರಾಯ ಪಟ್ಟಿದ್ದೇನೆ.

ಚಿಕ್ಕಮಗಳೂರು ಅರಣ್ಯ ವಿಭಾಗದಲ್ಲಿ ವೈರ್‌ಲೆಸ್ ಸೆಟ್‌ಗಳನ್ನು ಅಳವಡಿಸುವುದು

೧೯೭೪. ಶ್ರೀ ಐ. ಬಿ. ರಂಕರ್ (ಚಿಕ್ಕಮಗಳೂರು).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಚಿಕ್ಕಮಗಳೂರು ಅರಣ್ಯ ವಿಭಾಗಕ್ಕೆ ಸರ್ಕಾರದ ಅನುಮತಿ ಇಲ್ಲದೆ ವೈರ್‌ಲೆಸ್ ಅಳವಡಿಸಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮವೇನು ?

ಇ) ಸದರಿ ವೈರ್‌ಲೆಸ್ ಉಪಕರಣವು ಸಮರ್ಪಕವಾಗಿ ಕೆಲಸ ಮಾಡುತ್ತಿದೆಯೇ ಮತ್ತು ಅದಕ್ಕೆ ಏರ್ಪಾದ ಹಣವೆಷ್ಟು ? (ವಿವರ ನೀಡುವುದು).

ಈ) ಈ ಉಪಕರಣಗಳನ್ನು ಅಳವಡಿಸಿರುವುದರಿಂದ ಸರ್ಕಾರಕ್ಕಾಗಿರುವ ಉಪಯೋಗ ಲಾಭ ಮತ್ತು ನಷ್ಟಗಳೇನು ?

ಶ್ರೀ ಜಿ. ಎಸ್. ಜಾಗಲಕೋಟಿ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ಇಡೀ ಕರ್ನಾಟಕ ರಾಜ್ಯ ಅರಣ್ಯ ಇಲಾಖೆಗೆ ಈಗಿರುವ ನಿಸ್ತಂತು ಉಪಕರಣಗಳನ್ನು ವಿಸ್ತರಿಸಲು ಈಗಾಗಲೇ ಸರ್ಕಾರವು ನಿರ್ಧರಿಸಿದ್ದು ಈ ಬಗ್ಗೆ ಮೆ. ಭಾರತ್ ಎಲೆಕ್ಟ್ರಾನಿಕ್ ನಿಗಮ ಮತ್ತು ಮೆ. ಜಿ. ಎಲ್. ರಿಸರ್ಚ್‌ರವರಿಂದ ಮೊಹರು ಕೆಲಸ ಮಾಡಿಸಲು ಉಪಕರಣಗಳನ್ನು ಅಳವಡಿಸುವ ಕೆಲಸವನ್ನು ಹಣಕಾಸಿನ ಕೊರತೆಯಿಂದ ಪೂರೈಸಿರಲಿಲ್ಲ. ಆದರೆ ಪಶ್ಚಿಮ ಘಟ್ಟದ ಸಮಗ್ರ ಅಭಿವೃದ್ಧಿ ಯೋಜನೆಯಲ್ಲಿ ಅರಣ್ಯ ರಕ್ಷಣಾ ಕೆಲಸಕ್ಕೆ ಹಣವಿದ್ದುದರಿಂದ ಚಿಕ್ಕಮಗಳೂರು ವಿಭಾಗದಲ್ಲಿ ಈ ಉಪಕರಣಗಳನ್ನು ಅಳವಡಿಸಲಾಗಿದೆ.

ಆ) ಉದ್ಭವಿಸುವುದಿಲ್ಲ.

ಇ) ಈ ನಿಸ್ತಂತು ಉಪಕರಣಗಳು ಶೃಷ್ಟಿದಾಯಕವಾಗಿ ಕಾರ್ಯ ನಿರ್ವಹಿಸುತ್ತಿವೆ. ಅದಕ್ಕೆ ತಗಲಿದ ವೆಚ್ಚವು ಅಂದರೆ ೯ ಉಪಕರಣಗಳು ಮತ್ತು ಬ್ಯಾಟರಿ ಕೇಬಲ್ ಇತ್ಯಾದಿ ನಿರ್ಮಾಣ ವೆಚ್ಚವು ಸೇರಿ ಈ ರೀತಿ ಇರುತ್ತದೆ.

೧)	೯ ಉಪಕರಣ	೧,೨೦,೫೪೮-೦೦
೨)	ಬ್ಯಾಟರಿ. ಕೇಬಲ್ ಮತ್ತು ನಿರ್ಮಾಣದ ವೆಚ್ಚ	೩೭,೨೬೭-೯೦
	ಒಟ್ಟು	೧,೫೭,೬೦೭-೯೦

ಈ) ಈ ಉಪಕರಣಗಳನ್ನು ಅಳವಡಿಸಿದ ನಂತರ ೬ ತಿಂಗಳ ಅವಧಿಯಲ್ಲಿ ೨೨ ವಾಹನಗಳನ್ನು ಸುಮಾರು ೬.೫ ಟನ್ ಗಂಧವನ್ನು ಸರ್ಕಾರಕ್ಕೆ ಅಮಾನತ್ತು ಪಡಿಸಿಕೊಳ್ಳಲಾಗಿದೆ. ಮತ್ತು ಹೆಚ್ಚಿನ ಪ್ರಮಾಣದ ಅರಣ್ಯ ಉತ್ಪನ್ನಗಳ ಲೂಟಿ ಮತ್ತು ವನ್ಯ ಪ್ರಾಣಿಗಳ ಹತ್ಯೆಯನ್ನು ತಡೆಗಟ್ಟಲು ಸಹಾಯಕವಾಗಿದೆ.

ಶ್ರೀ ಐ. ಬಿ. ಶಂಕರ್.—ನನ್ನ ಮೊದಲನೇ ಪ್ರಶ್ನೆಗೆ ಸರಿಯಾದ ಉತ್ತರ ಕೊಟ್ಟಿಲ್ಲ. ಇದು ಪ್ರಶ್ನೆ ಕೇಳಿದವರನ್ನೇ ತಪ್ಪು ದಾರಿಗೆ ಎಳೆಯುವಂತಾಗಿದೆ. ಅವರು ಅನುಮತಿ ಕೇಳಿದ್ದರೆ ? ನೀವು ಕೊಟ್ಟಿದ್ದೀರಾ ? ನಾವು ಎಲ್ಲಿಯಾದರೂ ಮಾಡಿ, ಅದನ್ನು ನಾನು ಕೇಳಿಲ್ಲ. ನನ್ನ ಪ್ರಶ್ನೆಗೆ ಸರಿಯಾದ ಉತ್ತರ ಇಲ್ಲ. ಪಶ್ಚಿಮ ಘಟ್ಟದ ಯೋಜನೆಯಲ್ಲಿ ಅರಣ್ಯ ರಕ್ಷಣೆಯ ಕೆಲಸಕ್ಕೆ ಮುಂದು ಇದುವುದು ಗೊತ್ತಿರಲಿಲ್ಲ. ನೀವು ಜಿಲ್ಲಾ ಪರಿಷತ್ತಿನಲ್ಲಿ ಮೀಟಿಂಗ್ ಮಾಡಿದಾಗ ಹಣ ಲ್ಯಾಪ್ಸ್ ಆಗುತ್ತಿದೆ, ಇದನ್ನು ಡೈವರ್ಟ್ ಮಾಡಬೇಕೆಂದಾಗ ಯಾವುದೇ ಕಾರಣಕ್ಕಾಗಿ ಡೈವರ್ಟ್ ಮಾಡುವುದಕ್ಕಾಗುವುದಿಲ್ಲ ವೆಂದು ನಮ್ಮ ಮಾನವಿಯನ್ನು ತಿರಸ್ಕರಿಸಿದ್ದಾರೆ. ಅದಕ್ಕೂಸ್ಕರ ಪ್ರತ್ಯೇಕವಾಗಿ ಹಣ ಇಟ್ಟಿದ್ದೇವೆಂದು ಕಾಣಿಸಿದ್ದೀರಿ. ಅದು ಗೊತ್ತಾಗಲಿಲ್ಲ. ಈ ತರಹ ಹಣ ಉಪಯೋಗಿಸುವುದಾದರೆ ಪಶ್ಚಿಮ ಘಟ್ಟದ ಯೋಜನೆಯಲ್ಲಿ ಬಹಳಷ್ಟು ಹಣ ಲ್ಯಾಪ್ಸ್ ಆಗಿದೆ. ಬೇರೆ ಎಲ್ಲಾ ಕಡೆ ಮಾಡುವುದಕ್ಕೆ ಅನುಕೂಲ ಇದ್ದರೂ ಲ್ಯಾಪ್ಸ್ ಆಗುವುದಕ್ಕೆ ಕಾರಣವೇನು ? ನಾನು ವಿಷಯದಿಂದ ಒಂದು ಪ್ರಶ್ನೆ ಕೇಳುತ್ತೇನೆ, ಅದಕ್ಕೆ ಸ್ಪೆಸಿಫಿಕ್ ಆಗಿ ಉತ್ತರಿಸಬೇಕು. ಮೇಲಿನ ಅಧಿಕಾರಿಗಳು ಜವಾಬ್ದಾರಿ ಹೊತ್ತಿರುತ್ತಾರೆ. ಅವರಿಗೆ ಅನುಕೂಲ ಇಲ್ಲದಾಗ ಕೆಳಗಿನ ಅಧಿಕಾರಿಗಳಿಂದ ಎಕ್ಸ್‌ಪ್ಲನೇಷನ್ ಕೇಳುತ್ತಾರೆ. ಪ್ರತಿಯೊಬ್ಬ ಅಧಿಕಾರಿಯೂ ಸರ್ಕಾರದ ಅನುಮತಿ ಇಲ್ಲದೆ ಮಾಡಬಹುದು ಅನ್ನುವುದಾದರೆ ನಮ್ಮ ಕೊಪ್ಪ ಮತ್ತು ತರೀಕೆರೆಯಲ್ಲಿ ಕೂಡ ಸರ್ಕಾರದ ಅನುಮತಿ ಇಲ್ಲದೆ ನೇರವಾಗಿ ಕೆಲಸ ಮಾಡುವುದಕ್ಕೆ ಡಿ.ಎಫ್.ಓ.ಗೆ ಅನುಕೂಲವಾಗಿರುತ್ತದೆ. ಈ ಬಗ್ಗೆ ದಯವಿಟ್ಟು ಹೇಳಬೇಕು.

ಶ್ರೀ ರಮೇಶ್ ಸಿ. ಜಿಗಜಿಣಗಿ.—ಕೆಲವೊಮ್ಮೆ ಸಂದರ್ಭಗಳಲ್ಲಿ ಆಡಳಿತಾತ್ಮಕ ವಿಚಾರದಲ್ಲಿ ಬಹಳ ಅವಶ್ಯಕ ಆಗಿದ್ದಲ್ಲಿ ಸರ್ಕಾರಕ್ಕೆ ಬರೆದಾಗ ಅನುಮತಿ ಬರುವುದು ತಡವಾದರೆ ಕೆಲಸ ಮಾಡಲಿಕ್ಕೆ ಇಲಾಖೆಗೆ ಅಧಿಕಾರ ಇರುತ್ತದೆಂಬುದನ್ನು ಸದಸ್ಯರು ತಿಳಿದುಕೊಳ್ಳಬೇಕು. ಚಿಕ್ಕಮಗಳೂರು ಮತ್ತು ಭದ್ರಾವತಿಯ ಮಧ್ಯೆ ಲಕ್ಷವಳ್ಳಿಯಲ್ಲಿ ಒಂದು ಸಾರಿ ಅಧಿಕಾರಿಗಳ ಮೇಲೆ ಕಳ್ಳ ಸಾಗಣಿಗಾರರು ಆಕ್ರಮಣ ಮಾಡಿದಾಗ ಸರ್ಕಾರದ ಗಮನಕ್ಕೆ ಬಂದು ಈ ವ್ಯವಸ್ಥೆಯನ್ನು ಮಾಡಿದ್ದೇವೆ. ಮಾಡಿರತಕ್ಕ ವ್ಯವಸ್ಥೆ ಸರ್ಕಾರದ ಗಮನಕ್ಕೆ ಬಂದಿದೆ. ಆದರೆ ಇಲ್ಲಿಗಲ್ ಆಗಿ ಆಗಿರಲಿಲ್ಲ. ಕಾನೂನು ಚೌಕಟ್ಟಿನಲ್ಲಿ ಇದನ್ನು ಮಾಡಿದ್ದೇವೆಂದು ಮಾನ್ಯ ಸದಸ್ಯರಿಗೆ ಹೇಳುತ್ತೇನೆ.

ಶ್ರೀ ಐ. ಬಿ. ಶಂಕರ್.—ಲಕ್ಕವಳ್ಳಿ ಸೇರಿರುವುದು ಭದ್ರಾವತಿ ಡಿವಿಜನ್ನಿಗೆ. ಭದ್ರಾವತಿಯವರು ಏನಾದರೂ ಮಾಡಿದ್ದು ಎಂದು ಕಾರಣ ಹೇಳಿದ್ದರೆ ಮಂತ್ರಿಗಳ ಮಾತನ್ನು ಒಪ್ಪುತ್ತಿದ್ದೆ. ಭದ್ರಾವತಿಯಲ್ಲಿ ಆದುದಕ್ಕೆ ಯಾವುದೋ ಊರಿನಲ್ಲಿ ಮಾಡಿದರು ಎಂದು ಉತ್ತರಿಸಂತ್ತಾರೆ. ಇದು ಎತ್ತಿಗೆ ಕಾಯಿಲೆಯಾದರೆ ಎಮ್ಮೆಗೆ ಬರೆ ಹಾಕಿದರು ಅಂದಂತಾಗಿದೆ. ನನ್ನ ಅಭಿಪ್ರಾಯ ಇಷ್ಟೇ, ಸರ್ಕಾರದ ಅನುಮತಿ ತೆಗೆದುಕೊಳ್ಳುವುದಕ್ಕೆ ತೊಂದರೆ ಇದೆ, ಅನುಮತಿ ಇಲ್ಲದೆ ಮಾಡಬಹುದೆಂದು ಹೇಳುತ್ತಾರೆ. ಆದರೆ ಫೋನ್ ಇದೆ, ಫೋನ್ ಮೂಲಕ ವ್ಯವಹರಿಸಬಹುದು. ತೊಂದರೆ ಆದಾಗ ಮೇಲಿನ ಅಧಿಕಾರಿಗಳು ಸರ್ಕಾರದೊಡನೆ ವ್ಯವಹಾರ ಮಾಡುವುದಕ್ಕೆ ಆಗದೆ ಹೋದರೆ ಅವರು ಏತಕ್ಕೆ ಇರಬೇಕು ? ಸುಮ್ಮನೆ ಅವರನ್ನು ಡಿಫೆಂಡ್ ಮಾಡುವುದು ಬೇಡ. ನಿಮ್ಮ ಪ್ರಕಾರ ನೇರವಾಗಿ ಮೇಲಿನ ಅಧಿಕಾರಿಗಳು ಮಾಡಿದಾಗ ರಕ್ಷಣೆ ಕೊಡಬೇಕು. ಭದ್ರಾವತಿಯಲ್ಲಿ ಮಾಡಬಹುದು ಕೊಪ್ಪದಲ್ಲಿ ಮಾಡಬಹುದು. ಅಲ್ಲಿ ಅವರು ಮಾಡಿದಾಗ ಒಪ್ಪಿಗೆ ಕೊಡಬೇಕು. ನನ್ನ ಮೊದಲನೇ ಪ್ರಶ್ನೆಗೆ ಬೇಡದ ಉತ್ತರವನ್ನು ಕೊಟ್ಟಿದ್ದಾರೆ, ನಾನು ಕೇಳಿದ್ದನ್ನು ಕೊಟ್ಟಿಲ್ಲ. ಸರ್ಕಾರ ಇದರಲ್ಲಿ ನೇರವಾಗಿ ಭಾಗಿಯಾಗುತ್ತದೆಯೇ ಅಥವಾ ಇಲ್ಲವೇ ಎಂಬ ಉತ್ತರ ನನಗೆ ಬೇಕು. ಮೇಲಿನ ಅಧಿಕಾರಿಗಳು ಮಾಡಿದಾಗ ರಕ್ಷಣೆ ಕೊಡುತ್ತೀರಾ ?

ಶ್ರೀ ರಮೇಶ್ ಸಿ. ಜಿಗಜಿಣಗಿ.—ಮಾನ್ಯ ಅಧ್ಯಕ್ಷರೆ, ಇಂಥ ಸಂದರ್ಭದಲ್ಲಿ ಯಾವುದೇ ಅಧಿಕಾರಿ ಸರ್ಕಾರದ ಮತ್ತು ಜನರ ಹಿತದೃಷ್ಟಿಯನ್ನಿಟ್ಟುಕೊಂಡು ಕೆಲಸಗಳನ್ನು ಮಾಡಿದರೆ ಅನುಮತಿ ಕೊಡ ಬಹುದೆಂದು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.